**O.S No**. 412/2016 **DW**–1

**ದಿಃ 16.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಡಿ ಕೆ ಎಂ ವಕೀಲರಿಂದಃ**

ಈ ದಿನ ನಾನು ಕೆಲವೊಂದು ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ. ಅವುಗಳನ್ನು ನಿಶಾನೆಗಳನ್ನಾಗಿ ಗುರುತಿಸಬೇಕೆಂದು ಕೋರಿಕೊಳ್ಳುತ್ತೇನೆ.

1. ದಿಃ 13–06–2007 ರಂದು ಕ್ರಯಪತ್ರದ ಕಂಪ್ಯೂಟರೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ–1 ಎಂದು ಗುರುತಿಸಲಾಯಿತು.

2. ಮೂರು ಕೈ ಬರಹದ ಮೂಟೇಷನ್ ರಿಜಿಸ್ಟರನ ಪ್ರತಿಗಳನ್ನು ಹಾಜರುಪಡಿಸಿದ್ದು ಅದನ್ನು ನಿಡಿ–2 ರಿಂದ 4 ಎಂದು ಗುರುತಿಸಲಾಯಿತು.

3. ಸರ್ವೆನಂಬರ್ 43/1 ರ ಕೈ ಬರಹದ ಪಹಣಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ–5 ಎಂದು ಗುರುತಿಸಲಾಯಿತು.

4. ತೆರಿಗೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ–6 ಎಂದು ಗುರುತಿಸಲಾಯಿತು.

5. ಪುರಸಭೆ ಮುಖ್ಯಾಧಿಕಾರಿಗಳು, ಚನ್ನರಾಯಪಟ್ಟಣ ಇವರ ಆದೇಶದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ–7 ಎಂದು ಗುರುತಿಸಲಾಯಿತು.

6. ಅನುಮೋದನೆ ನಕ್ಷೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ–8 ಎಂದು ಗುರುತಿಸಲಾಯಿತು.

7. ಅಲಿನೇಷನ್ ಮತ್ತು ಅಲಿನೇಷನ್ ನಕ್ಷೆಯ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ–9 ಮತ್ತು 10 ಎಂದು ಗುರುತಿಸಲಾಯಿತು.

8. ಎರಡು ಕಟ್ಟಡ ಪರವಾನಿಗೆಯನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ–11 ಮತ್ತು 12 ಎಂದು ಗುರುತಿಸಲಾಯಿತು.

9. ಏಳು ತೆರಿಗೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ–13 ರಿಂದ 19 ಎಂದು ಗುರುತಿಸಲಾಯಿತು.

10. ಇ – ಖಾತಾದ ಕಂಪ್ಯೂಟರೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ–20 ಎಂದು ಗುರುತಿಸಲಾಯಿತು.

11. ಸರ್ವೆನಂಬರ್ 43/1, ಸರ್ವೆನಂಬರ್ 43/7, ಸರ್ವೆನಂಬರ್ 43/17, ಸರ್ವೆನಂಬರ್ 43/8, ಸರ್ವೆನಂಬರ್ 43/29, ಕಂಪ್ಯೂಟರೀಕೃತ ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ–21 ರಿಂದ 25 ಎಂದು ಗುರುತಿಸಲಾಯಿತು.

12. ಎರಡು ನಕ್ಷೆಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅದನ್ನು ನಿಡಿ–26 ಮತ್ತು 27 ಎಂದು ಗುರುತಿಸಲಾಯಿತು.

13. ಐದು ಫೋಟೋಗಳನ್ನು ಮತ್ತು ಒಂದು ಸಿ ಡಿಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ–28 ರಿಂದ 33 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚನ್ನರಾಯಪಟ್ಟಣ.**